**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ. 3722/2023**

ಪಿರ್ಯಾದುದಾರರುಃ ಶ್ರೀ ಹಣಮಂತ ರಾಮಚಂದ್ರ ಪಾಟೀಲ

- ವಿರುದ್ದ -

ಆರೋಪಿ: ಶ್ರೀರೇವಣ್ಣ ಲಕ್ಷ್ಮಪ್ಪ ಹಂಡಿಬಾಗ

**ದಂಡ ಪ್ರಕ್ರಿಯೆ ಸಂಹಿತೆ ಕಲಂ. 313 ರ ಪ್ರಕಾರ ಆರೋಪಿತರ ಹೇಳಿಕೆ**

ಪ್ರಶ್ನೆ 1. ಪಿರ್ಯಾದುದಾರರ ಪರ ಸಾಕ್ಷಿದಾರರು ಹೇಳಿರುವ ಸಾಕ್ಷ್ಯಗಳನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ 2. ಚಾಸಾ.1/ ಹಣಮಂತ ರಾಮಚಂದ್ರ ಪಾಟೀಲ, ಇವರು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದಿದಾರರು ಮತ್ತು ಆರೋಪಿಯಾದ ನೀವು ಸುಮಾರು **02** ವರ್ಷಗಳಿಂದ ಒಳ್ಳೆಯ ಪರಿಚಯಸ್ಥರಿರುತ್ತೀರಿ**,** ಹೀಗಿರುವಾಗ ಆರೋಪಿಯಾದ ನೀವು ಸುಮಾರು **01** ವರ್ಷದ ಹಿಂದೆ ನಿಮ್ಮ ಮನೆತನದ ಅಡಚಣೆ ಇರುವ ಸಲುವಾಗಿ ಪಿರ್ಯಾದುದಾರರ ಕಡೆಯಿಂದ ರೂ**.5,00,000/-**ಗಳ ಸಾಲ ಕೇಳಿದ್ದು**,** ಅದಕ್ಕೆ ಪಿರ್ಯಾದುದಾರರು ಒಂದು ವರ್ಷದ ಹಿಂದೆಯೇ ರೂ**.5,00,000/-**ಗಳನ್ನು ಆರೋಪಿಯಾದ ನಿಮಗೆ ನೀಡಿರುತ್ತಾರೆ**.** ನೀವು ಸದರಿ ಹಣವನ್ನು ಒಂದು ವರ್ಷದ ನಂತರ ಮರಳಿ ಕೊಡುತ್ತೇನೆಂದು ತಿಳಿಸಿರುತ್ತಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 3. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದುದಾರರು ಆರೋಪಿಯಾದ ನಿಮಗೆ 2023 ನೇ ಸಾಲಿನ ಜೂನ್ ತಿಂಗಳ ಮೊದಲನೇ ವಾರದಲ್ಲಿ ಸದರಿ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ದಿಃ07-06-2023 ರಂದು ನಿಮ್ಮ ಯೂನಿಯನ್ ಬ್ಯಾಂಕ್ ಅವರಾದಿ ಶಾಖೆ ಇಲ್ಲಿಗೆ ಸೇರಿದ ಚೆಕ್ ನಂ.003656 ಮತ್ತು 003657 ನೇದ್ದನ್ನು ತಲಾ ರೂ.2,50,000/- ಗಳ ಎರಡು ಚೆಕ್ಕುಗಳನ್ನು ಪಿರ್ಯಾದುದಾರರಿಗೆ ನೀಡಿರುತ್ತಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 4. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯಿರುವ ಎಚ್ ಡಿ ಎಫ್ ಸಿ ಬ್ಯಾಂಕ್ , ಗೋಕಾಕ ಶಾಖೆ ಇಲ್ಲಿಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ" (DRAWER SIGNATURE DIFFERS) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 08-06-2023 ರಂದು ಸದರಿ ಚೆಕ್ ಅಮಾನ್ಯಗೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 5. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 14-06-2023 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದರೂ, ಸದರಿ ನೋಟಿಸು ದಿನಾಂಕ 16-06-2023 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ 6. ಇದೇ ಸಾಕ್ಷಿದಾರರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನೀಡಿದಂತ ಚೆಕ್ಕನ್ನು ನಿಪಿ.1 ಮತ್ತು 2, ಅದರಲ್ಲಿರುವ ನಿಮ್ಮ ಸಹಿಯನ್ನು ನಿಪಿ.1(ಎ) ಮತ್ತು 2(ಎ) ಬ್ಯಾಂಕ್‌ನವರು ನೀಡಿದಂತಹ ಹಿಂಬರಹವನ್ನು ನಿಪಿ.3, ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ನಿಪಿ.4, ಅಂಚೆ ರಶೀದಿಯನ್ನು ನಿಪಿ.5, ಅಂಚೆ ತಲುಪೊಪ್ಪಿಗೆ ಪತ್ರವನ್ನು ನಿಪಿ.6, ರಿ.ಸ ನಂ.181/3 ಮತ್ತು 330 ರ 02 ಪಹಣಿ ಪತ್ರಿಕೆಗಳನ್ನು ನಿಪಿ.7 ಮತ್ತು 8 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ 7. ಈ ಪ್ರಕರಣದ ಬಗ್ಗೆ ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಬಯಸುವಿರಾ ?

ಉತ್ತರಃ

ಪ್ರಶ್ನೆ 8. ನಿಮ್ಮ ಪರ ವಿಚಾರಣೆ ಮಾಡಲು ಸಾಕ್ಷಿಗಳೇನಾದರೂ ಇದೆಯಾ ?

ಉತ್ತರಃ

(ಮೇಲಿನ ಹೇಳಿಕೆಗಳನ್ನು ದಿಃ 30-08-2024 ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ನಂತರ ಆರೋಪಿ ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸುತ್ತೇನೆ.)

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**